

'ನ್ಯಾಚುರಲಿಸ್ಟ್ ಆಗೋಕ್ಕಿಂತ ಮುಂಚೆ ನಾನು ಕಾಡು ಪ್ರಾಣಿ, ಹಕ್ಕಿಗಳ ಶಿಕಾರಿ ಮಾಡುತ್ತಿದ್ದೆ. ಮೊಲ, ಹಂದಿ, ಜಿಂಕೆ, ಕಾಡು ಕೋಳಿ, ಎಲ್ಲಾ ಮಾಮೂಲಿ ಬಿಡಿ. ಹುಲಿ, ಚಿರತೆ, ಹಾವು, ಕಾಗೆ ಬಿಟ್ಟು ಎಲ್ಲಾ ಉಡಾಯಿಸಿದ್ದೀನಿ. ನಾನೆಂಥ ಗುರಿಕಾರ ಗೊತ್ತಾ? ಚಾಟಿ ಬಿಲ್ಲಿಂದ ಗನ್ನಿನ ತನಕ, ಬಿಲ್ಲಿಂದ, ಕವಣೆ ಕಲ್ಲಿನ ತನಕ, ಬಲೆಯಿಂದ ಗಾಳ ತನಕ ಎಲ್ಲಾ ಬಳಸಿದ್ದೀನಿ. ನನ್ನ ಗೆಣೆಕಾರರ ಮೇನ್ ಹವ್ಯಾಸವೇ ಇದಾಗಿತ್ತು. ಕೊಂದಿದ್ದು ಜಾಸ್ತಿ, ಮಾರಿದ್ದು ಕಮ್ಮಿ, ಹಂಚಿದ್ದು ಲೆಕ್ಕ ಇಲ್ಲ ಬಿಡಿ. ಶಿಕಾರೀಲಿ ದುಡಿದ ದುಡ್ಡೆಲ್ಲಾ ಶೋಕಿಯಲ್ಲೇ ಹೋಯ್ತು. ಆದೇನೋ ದರಿದ್ರನೋ? ಬರಕತ್ತಿಲ್ಲ ಬಿಡಿ. ನೀವೆಲ್ಲ ಕೊಂದ ಪಾಪ ಅಂತಿರೋ ಏನೋ? ದೇವ್ರು ಸರಿಯಾದ ಶಿಕ್ಷೆ ಕೊಟ್ಟ. ಅದನ್ನ ಹೇಳಂಗಿಲ್ಲ ಬಿಡಿ. ಕಾಡಹಕ್ಕಿ ಶಿಕಾರಿ ಮಾಡಿದವನು ಭಿಕಾರೀನೆ. ಅವು ಸಾಯೋವಾಗ ಶಾಪ ಕೊಡ್ತಾವಂತೆ ಸ್ವಾಮಿ. ದೇವ್ರು ಇದನ್ನೆಲ್ಲಾ ಕೇಳ್ಕೊಂಡು ಸುಮ್ನಿರ್ತಾನಂತೆ. ಒಳ್ಳೆ ಟೈಮ್ ನೋಡ್ಕೊಂಡ್ ಸರಿಯಾಗಿ ಬತ್ತಿ ಇಡೋಕೆ ಕಾಯ್ತಾನಂತೆ. ಆಮೇಲೆ ನನ್ನ ಸಂಸಾರಾನೂ ಹಾಳಾಗಿ ಹೋಯ್ತು. ಮಗನ್ನೂ ಉಳಿಸಿಕೊಳ್ಳೋಕೆ ಆಗಲಿಲ್ಲ. ಇಲ್ನೋಡಿ ಫಾರೆಸ್ಟ್ ಡಿಪಾರ್ಟ್ಮೆಂಟ್ ಕೊಟ್ಟಿರೋ ಬರೆ ಇನಾಮು' ಎಂದು ಶರ್ಟು ಎತ್ತಿ ಹೊಟ್ಟೆ, ಬೆನ್ನು ತೋರಿಸಿದ. ಅಲ್ಲಿ ಸುಟ್ಟ ಕಲೆಗಳು ಗೂಗಲ್ ಮ್ಯಾಪಿನಂತಿದ್ದವು. ಅವನೇನು ಕಮ್ಮಿ ಹೊಡೆತ ತಿಂದವನಂತೆ ಕಾಣಲಿಲ್ಲ.

ಬೇಜಾರ್ ಅದಲ್ಲ. ನನ್ ಕಳ್ ಶಿಕಾರಿ ಮಾಲಲ್ಲಿ ಪಾಲ್ ತಿಂದ ಹಲ್ಕಾ ನನ್ಮಕ್ಕಳೇ ಎಳೆದಾಡಿ ಹೊಡೆದು ಬರೆ ಹಾಕಿದ್ರಲ್ಲ ಅದು ನೋವು. ದೇವ್ರು ಅವರಿಗೇನು ಶಿಕ್ಷೆ ಕೊಟ್ಟಿಲ್ಲ ಅಂತೀರಾ? ಕೊಂದ ಪಾಪ ತಿಂದ ಪಾಪ ಎರಡೂ ಸಮವಾಗಿರಬೇಕಲ್ಲವೇ? ಎಂದ. ಈತ ಎಲ್ಲದರಲ್ಲೂ ತಮಾಷೆ ಹುಡುಕಿ ಮಾತಾಡುತ್ತಿದ್ದ. ಇವನ ಶಿಕಾರಿ ಅನುಭವಗಳು